# ಕೋಚ್ 'ಹೆಡ್' ಮೇಲೆ ಕಣ್ಣು?

■ ಬಿಂದು

ಭಾರತ ತಂಡ ವಿಶ್ವಕಪ್ ಕ್ರಿಕೆಟ್‌ನಿಂದ ಹೊರಬಿದ್ದಿದೆ. ಆರಂಭಿಕ ಸುತ್ತಿನಲ್ಲಿ ಇಂಗ್ಲೆಂಡ್ ಬಿಟ್ಟು ಉಳಿದೆಲ್ಲ ತಂಡಗಳ ವಿರುದ್ಧ ಜಯ ಸಾಧಿಸಿ ಅಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದ ಭಾರತ, ಫೈನಲ್ ತಲುಪುವುದು ಖಂಡಿತ ಎಂದೇ ಎಲ್ಲರೂ ನಂಬಿದ್ದರು.

ಆದರೆ ಸೆಮಿಫೈನಲ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಸೋಲಪ್ಪಿದ್ದು ಎಲ್ಲರಿಗೂ ತೀವ್ರ ಆಘಾತ ಉಂಟು ಮಾಡಿದೆ. ಈಗ ಈ ಸೋಲಿನ ಹೊಣೆಯನ್ನು ಯಾರ ತಲೆಗೆ ಕಟ್ಟುವುದು ಎನ್ನುವ ಚರ್ಚೆ ಭರದಿಂದ ನಡೆದಿದೆ. ಹೆಚ್ಚಿನ ಜನರಿಗೆ ಈಗ ಕಾಣಿಸುತ್ತಿರುವುದು ಹೆಡ್ ಕೋಚ್ ರವಿಶಂಕರ್ ಜಯದ್ರಥ ಶಾಸ್ತ್ರಿಯ ಹೆಡ್! ನ್ಯೂಜಿಲೆಂಡ್ ವಿರುದ್ಧ ಪಂದ್ಯದಲ್ಲಿ ಬ್ಯಾಟಿಂಗ್ ಆರ್ಡರ್ ಕುರಿತು ಹೆಡ್‌ಕೋಚ್ ಸರಿಯಾದ ನಿರ್ಧಾರ ಕೈಗೊಳ್ಳಲಿಲ್ಲ. ಮಹೇಂದ್ರಸಿಂಗ್ ದೋನಿಯನ್ನು 5 ಅಥವಾ 6ನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಇಳಿಸಬೇಕಿತ್ತು ಎನ್ನುವುದು ಈಗ ಬಹುಜನರ ವಾದ. ಈ ಮಧ್ಯೆ ನ್ಯೂಜಿಲೆಂಡ್ ಪಂದ್ಯದ ವೇಳೆ ಡ್ರೆಸಿಂಗ್ ರೂಮ್‌ನಿಂದ ಪೆವಿಲಿಯನ್‌ಗೆ ಬಂದು ಹೆಡ್‌ಕೋಚ್ ಬಳಿ ನಿಂತ ಕ್ಯಾಪ್ಟನ್ ವಿರಾಟ್ ಕೊಹ್ಲಿ, ಅಸಮಾಧಾನದಿಂದ ಮಾತನಾಡಿದ ವಿಷಯವೇನು ಎನ್ನುವುದರ ಬಗ್ಗೆಯೂ ಚರ್ಚೆ ನಡೆಯುತ್ತಿದೆ. ಕೊಹ್ಲಿ ಜೊತೆಗೆ ಶಾಸ್ತ್ರಿ ಸಂಬಂಧ ಇತ್ತೀಚೆಗೆ ಹಳಸಿತ್ತು ಎನ್ನುವವರೂ ಇದ್ದಾರೆ.

ಭಾರತ ತಂಡದ ಹೆಡ್ ಕೋಚ್ ಆಗಿ ರವಿ ಶಾಸ್ತ್ರಿ, ವರ್ಷಕ್ಕೆ 8 ಕೋಟಿ ರೂಪಾಯಿ ಸಂಭಾವನೆಗೆ ಒಪ್ಪಿಕೊಂಡು ಅಧಿಕಾರ ವಹಿಸಿಕೊಂಡದ್ದು 2017ರ ಜುಲೈನಲ್ಲಿ. ಸಂಭಾವನೆ ಹಿಂದಿನ ಕೋಚ್ ಅನಿಲ್ ಕುಂಬ್ಳೆಗಿಂತ ಹೆಚ್ಚು. ಕುಂಬ್ಳೆ ಮತ್ತು ಕ್ಯಾಪ್ಟನ್ ಕೊಹ್ಲಿ ನಡುವೆ ಭಿನ್ನಮತ ಶುರುವಾದ ಬಳಿಕ ಕುಂಬ್ಳೆ ರಾಜೀನಾಮೆ ಕೊಟ್ಟು ಹೊರಬಂದರು. ಶಾಸ್ತ್ರಿಗೆ ಜವಾಬ್ದಾರಿ ಕೊಟ್ಟಾಗ ತಂಡದ ಮುಂದೆ ಇದ್ದ ಮುಖ್ಯ ಗುರಿ ವಿಶ್ವಕಪ್ ಗೆಲ್ಲುವುದೇ. ಜೊತೆಗೆ ಸಂಜಯ್ ಬಂಗಾರ್ (ಬ್ಯಾಟಿಂಗ್ ಕೋಚ್), ಭರತ್ ಅರುಣ್ (ಬೌಲಿಂಗ್) ಮತ್ತು ಆರ್. ಶ್ರೀಧರ್ (ಫೀಲ್ಡಿಂಗ್ ಕೋಚ್) ಆಯ್ಕೆಯಾದರು. ವಿಶ್ವಕಪ್ ನಡುವೆಯೇ ಈ ತಂಡದ ಕಾಂಟ್ರಾಕ್ಟ್ ಅವಧಿ ಮುಗಿಯುವುದಿತ್ತು. ಆದರೆ ಅವಧಿಯನ್ನು ಇನ್ನೊಂದು ವರ್ಷಕ್ಕೆ ವಿಸ್ತರಿಸಬೇಕೆಂದು ಶಾಸ್ತ್ರಿ ಟೀಂ ಬಿಸಿಸಿಐಗೆ ಮನವಿ ಮಾಡಿತು. ಮುಂದಿನ ವರ್ಷ ಆಸ್ಟ್ರೇಲಿಯಾದಲ್ಲಿ 20ಟ್ವೆಂಟಿ ವಿಶ್ವಕಪ್ ನಡೆಯುವ ಹಿನ್ನೆಲೆಯಲ್ಲಿ ಅಲ್ಲಿವರೆಗೆ ಉಳಿದುಕೊಳ್ಳುವುದು ಶಾಸ್ತ್ರಿ ಉದ್ದೇಶವಾಗಿತ್ತು. ಆದರೆ ಮಂಡಳಿಯ ಆಯ್ಕೆ ತಂಡ ಒಪ್ಪಲಿಲ್ಲ. ಬದಲಾಗಿ ವಿಶ್ವಕಪ್ ಮುಗಿದು 45 ದಿನಗಳ ಹೆಚ್ಚುವರಿ ಅವಧಿಗೆ ಮಾತ್ರ ವಿಸ್ತರಣೆ ಮಾಡಿತು.

ಕಾಗದದ ಮೇಲೆ, ಭಾರತ ತಂಡವೇ ವಿಶ್ವಕಪ್ ಗೆಲ್ಲುವ ಫೇವರೆಟ್ ಎನ್ನುವುದರಲ್ಲಿ ಎರಡು ಮಾತಿರಲಿಲ್ಲ. ಮೊದಲ ಸುತ್ತಿನ ಅಷ್ಟೂ ಪಂದ್ಯಗಳ ಸಾಧನೆ ನೋಡಿದರೂ ಭಾರತದ ಅರ್ಹತೆ ಎದ್ದು ಕಾಣುತ್ತಿತ್ತು. ಹಾಗಿದ್ದೂ ನ್ಯೂಜಿಲೆಂಡ್ ವಿರುದ್ಧ ಸೋತದ್ದೇಕೆ? ಇದಕ್ಕೆ ತಂಡದ ಹೆಡ್ ಕೋಚ್ ಅನ್ನು ಹೊಣೆ ಮಾಡುವುದು ಸರಿಯೇ? ವಿಶ್ವಕಪ್ ಗೆದ್ದುಕೊಂಡೇ ಬರುತ್ತೇನೆ ಎನ್ನುವ ಅದಮ್ಯ ಆತ್ಮವಿಶ್ವಾಸ ರವಿ ಶಾಸ್ತ್ರಿ ಅವರದ್ದಾಗಿತ್ತು. ಅದಕ್ಕೆ ತಕ್ಕಂತೆ ಈ ಸಲದ ತಂಡವೂ ಅತ್ಯುತ್ತಮವಾಗಿತ್ತು. ಬ್ಯಾಟಿಂಗ್, ಬೌಲಿಂಗ್, ಫೀಲ್ಡಿಂಗ್ ಎಲ್ಲವನ್ನೂ ರವಿ ಶಾಸ್ತ್ರಿಯ ಎಚ್ಚರದ ಕಣ್ಣೋಟವಿತ್ತು. ಡ್ರೆಸ್ಸಿಂಗ್ ರೂಮ್‌ನಲ್ಲಿ ಆಟಗಾರರಿಗೆ ಆತ್ಮವಿಶ್ವಾಸ ತುಂಬುವ ವಿಷಯದಲ್ಲೂ ಶಾಸ್ತ್ರಿ ಮುಂದಿದ್ದರು. ಆಟದ ತಂತ್ರಗಾರಿಕೆ, ತಂಡದ ನಡುವೆ ಒಗ್ಗಟ್ಟು ಎಲ್ಲವನ್ನೂ ಒಂದು ಹದದಲ್ಲಿ ಕಾಯ್ದುಕೊಂಡಿದ್ದರು.

ವಿಶ್ವಕಪ್ ಪಂದ್ಯಗಳು ಆರಂಭವಾದ ಬಳಿಕ ರವಿಶಾಸ್ತ್ರಿ ಒಂದು ರೀತಿಯ ನಿಗೂಢ ಮೌನವನ್ನು ಕಾಯ್ದುಕೊಂಡು ಬಂದಿದ್ದರು. ಪತ್ರಿಕಾ ಹೇಳಿಕೆಯಿಲ್ಲ, ಪತ್ರಿಕೆಗಳಿಗೆ ಫೋಟೊ ಪೋಸ್ ಇಲ್ಲ, ಪತ್ರಿಕಾಗೋಷ್ಠಿ ಇಲ್ಲ, ಪತ್ರಕರ್ತರಿಗೆ ಸಂದರ್ಶನವೂ ಇಲ್ಲ. ಎಲ್ಲವನ್ನೂ ಫೈನಲ್ ಪಂದ್ಯದ ಕೊನೆಗೆ ಕಾಯ್ದಿರಿಸಿದ್ದರೇನೋ ಎನ್ನುವಂತಿತ್ತು ಅವರ ನಡೆ. ಸಾಮಾನ್ಯವಾಗಿ ರವಿಶಾಸ್ತ್ರಿ ಪ್ರಚಾರಪ್ರಿಯ ಎನ್ನುವ ಮಾತೊಂದಿದೆ. ಆದರೆ ಈ ಸಲ ಅದಕ್ಕೆ ತದ್ವಿರುದ್ಧ ನಡೆ.

2015ರಲ್ಲಿ ಭಾರತದ ಕ್ರಿಕೆಟ್ ತಂಡ ವಿಶ್ವಕಪ್ ಸೆಮಿಫೈನಲ್ ತಲುಪಿದಾಗ ಇದೇ ರವಿಶಾಸ್ತ್ರಿ ತಂಡದ ನಿರ್ದೇಶಕ ಆಗಿದ್ದರು. ಹೆಡ್‌ಕೋಚ್ ಆಗಿದ್ದದ್ದು ಅನಿಲ್ ಕುಂಬ್ಳೆ. ಆ ಸಲ ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯದ ವಿರುದ್ಧ ಸೋತು ಭಾರತ ಹೊರಬಿದ್ದಿತು. ಈ ಸಲ ನ್ಯೂಜಿಲೆಂಡ್ ವಿರುದ್ಧ.

'5 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡು ತಂಡ ತೀರಾ ದುಃಸ್ಥಿತಿಯಲ್ಲಿದ್ದಾಗ ದೋನಿಯನ್ನು ಕಳುಹಿಸುವುದು ಬಿಟ್ಟು, 7ನೇ ಕ್ರಮಾಂಕಕ್ಕೆ ಕಳಿಸಿದ್ದೇಕೆ? ಈ ನಿರ್ಧಾರ ವಿವೇಚನೆಯಿಂದ ಕೂಡಿದ್ದೇ' ಎನ್ನುವ ಪ್ರಶ್ನೆಯನ್ನು ಮಾಜಿ ಕ್ಯಾಪ್ಟನ್ ಸೌರವ್ ಗಂಗೂಲಿ ಕೇಳಿದ್ದಾರೆ. ಶಾಸ್ತ್ರಿ ಉತ್ತರಿಸಲು ಹೋಗಿಲ್ಲ. ಬಹುಶಃ ವಾಪಸ್ ಬಂದ ಮೇಲೆ ಬಿಸಿಸಿಐ ತನಿಖೆಯಲ್ಲಿ ಉತ್ತರ ಕೊಡಬಹುದು.

ಇನ್ನೀಗ ಆಗಸ್ಟ್‌ನಲ್ಲಿ ನಡೆಯಲಿರುವ ಭಾರತ ತಂಡದ ವೆಸ್ಟ್ ಇಂಡೀಸ್ ಪ್ರವಾಸಕ್ಕೆ ಶಾಸ್ತ್ರಿ ಆ್ಯಂಡ್ ಟೀಂ ಇರಲಿದೆ. ಅದಕ್ಕೂ ಮುನ್ನವೇ ಮುಂದಿನ ಹೆಡ್ ಕೋಚ್ ಮತ್ತು ಇತರ ಕೋಚ್‌ಗಳ ಆಯ್ಕೆಗೆ ಬಿಸಿಸಿಐ ತಜ್ಞರ ಸಮಿತಿ ಸಭೆ ಸೇರಲಿದೆ. ಇನ್ನೊಮ್ಮೆ ಹೆಡ್ ಕೋಚ್ ಆಗಲು ರವಿಶಾಸ್ತ್ರಿಯೂ ಅರ್ಜಿ ಸಲ್ಲಿಸಬಹುದು. ಆದರೆ ಅರ್ಜಿ ಹಾಕಿ ಎಂದು ಆಯ್ಕೆ ಸಮಿತಿಯಂತೂ ಈ ಸಲ ಸಲಹೆ ನೀಡುವುದಿಲ್ಲ. ಕಪಿಲ್‌ದೇವ್ ಮುಖ್ಯಸ್ಥರಾಗಿರುವ ಆಯ್ಕೆ ಸಮಿತಿ ಯಾರನ್ನು ಆಯ್ಕೆ ಮಾಡುತ್ತದೆ ಎನ್ನುವುದು ಕುತೂಹಲಕರ. 6.3 ಅಡಿ ಎತ್ತರದ ನೀಳಕಾಯದ ಹೆಡ್‌ಕೋಚ್, 80ರ ದಶಕದಲ್ಲಿ ಭಾರತ ತಂಡದ ಆಕರ್ಷಕ ಬ್ಯಾಟ್ಸ್‌ಮನ್ ಆಗಿದ್ದಾಗ ಸಿಕ್ಸರ್‌ಗಳನ್ನು ಬಾರಿಸುತ್ತಿದ್ದಂತೆ ಮತ್ತೆ ಹೆಡ್‌ಕೋಚ್ ಆಗಿ ಮರಳಬಹುದೆ?



Printed and Published by B.A. Ravi on behalf of The Printers (Mysore) Private Ltd.
Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65